ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ05-08-2025 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಆರ್ ಆರ್ ಎಚ್ ವಕೀಲರಿಂದಃ

9. ದಾವಾಸ್ತಿ ನನ್ನ ಮತ್ತು 5 ರಿಂದ 10 ನೇ ಪ್ರತಿವಾದಿಯ ನಡುವೆ ಯಾವ ರೀತಿಯಲ್ಲಿ ವಿಭಾಗ ಆಗಿರುತ್ತದೆ ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವೈವಾಟಿಯ ಆಧಾರದ ಮೇಲೆ ವಿಭಾಗ ಅಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ . ಸದರಿ ವಿಭಾಗ ನಮ್ಮ ಕುಟುಂಬದಲ್ಲಿ ಯಾವ ರೀತಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

10. ದಾವಾಯಲ್ಲಿ ತೋರಿಸಿರುವ ಮನೆ ನನ್ನ ಭಾಗಕ್ಕೆ ಯಾವ ರೀತಿ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

11. ನನ್ನ ತಂದೆ ದಾವಾಸ್ತಿಯಲ್ಲಿ ಹೇಳಿರುವ ವಾಸ್ತವ್ಯ ಮನೆಯನ್ನು ನನ್ನ ಹೆಸರಿಗೆ ಮಾಡಿರುವ ಬಗ್ಗೆ ಕರಾರು ಪತ್ರವನ್ನು ಮಾಡಿರುತ್ತಾರೆ. ನನ್ನ ತಂದೆ ದಾವಾಸ್ತಿಯಲ್ಲಿ ಹೇಳಿರುವ ವಾಸ್ತವ್ಯ ಮನೆಯನ್ನು ನನ್ನ ಹೆಸರಿಗೆ ಯಾವುದೇ ದಾಖಲೆಯನ್ನು ಮಾಡಿಕೊಡದೇ ಇದ್ದರೂ ಸಹ ಮಾಡಿಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

12. ದಾವಾಸ್ತಿಯಲ್ಲಿರುವ Form house ನ್ನು ರಿಪೇರಿ ಮಾಡಲು 4 ನೇ ಪ್ರತಿವಾದಿ ಗ್ರಾಮ ಪಂಚಾಯತಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದೇನು. ಸದರಿ ಅನುಮತಿ ಕೋರಿ ಸಲ್ಲಿಸಿದ ಅರ್ಜಿಯ ಜೊತೆ ಯಾವ ರೀತಿಯ Form house ರಿಪೇರಿ ಮತ್ತು ಅದರ ನಕ್ಷೆ , ಯೋಜನೆ ವರದಿಯನ್ನು ಸಲ್ಲಿಸಿರುವುದಿಲ್ಲ.

13. ದಾವಾಸ್ತಿಯಲ್ಲಿರುವ Form house ನ್ನು ರಿಪೇರಿ ಮಾಡಲು 4 ನೇ ಪ್ರತಿವಾದಿ ಗ್ರಾಮ ಪಂಚಾಯತಗೆ ಅನುಮತಿ ಕೋರಿ ಸಲ್ಲಿಸಿದ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೊ ಇಲ್ಲವೊ ನನಗೆ ಈಗ ಹೇಳಲು ಆಗುವುದಿಲ್ಲ.

14. ನಿ.ಪಿ-5 ರಲ್ಲಿ ನಾನು ಯಾವ ದಿನಾಂಕದಂದು ದಾವಾಸ್ತಿಯಲ್ಲಿರುವ Form house ನ್ನು ರಿಪೇರಿಗೆ ಸಂಬಂದಿಸಿದಂತೆ ಅನುಮತಿ ಕೋರಿ 4 ನೇ ಪ್ರತಿವಾದಿ ಗ್ರಾಮ ಪಂಚಾಯತಗೆ ಅರ್ಜಿ ನೀಡಿರುತ್ತೇನೆ. ನಮೂದಿಸಿಲ್ಲ ಎಂದರೆ ಸರಿ.

15. ನಿ.ಪಿ-5 ರಲ್ಲಿ ಹಳೆ ಮನೆಗೆ ತಾಗಿ ಒಂದು ಕಟ್ಟಡವನ್ನು ಕಟ್ಟಲು ಅನುಮತಿ ಕೊರಿ ಅರ್ಜಿ ನೀಡಿರುತ್ತೇನೆ ಎಂದರೆ ಸರಿ.

16. ನಾನು ದಾವಾಸ್ತಿಯಲ್ಲಿ ಹೊಸ ಕಟ್ಟಡವನ್ನು ನಿರ್ಮಿಸುವ ಸಲುವಾಗಿ ನಿ.ಪಿ-5 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯಲ್ಲಿ ಕಟ್ಟಡ ಕಟ್ಟಲು ಅನುಮತಿ ಕೋರಿ ಸಲ್ಲಿಸಿದ ಅರ್ಜಿ ಜೊತೆ ಕಟ್ಟಡ ಕಟ್ಟಲು plan, estimation ನ್ನು ಗ್ರಾಮ ಪಂಚಾಯತ ಗೆ ನೀಡಿಲ್ಲ ಎಂದರೆ ಸರಿ.

17. ನಾನು ಗ್ರಾಮ ಪಂಚಾಯತ ಸದಸ್ಯನಾಗಿದ್ದೆನು. ನಾನು High school ಕಮಿಟಿಯ ಸದಸ್ಯನಾಗಿರುತ್ತೇನೆ .

18. Form house ರಚನೆಗೆ ಸಂಬಂದಿಸಿದಂತೆ ಸಂಬಂದಪಟ್ಟ ಗ್ರಾಮ ಪಂಚಾಯತದಿಂದ ಅನುಮತಿ ಪಡೆಯ ಬೇಕೊ ಇಲ್ಲವೊ ಎಂದು ಕಾನಾನು ನನಗೆ ಗೊತ್ತಿಲ್ಲ.

19. 4 ನೇ ಪ್ರತಿವಾದಿ ದಾವಾಸ್ತಿಗೆ ಸಂಬಂದಿಸಿದಂತೆ ಯಾವ ದಿನಾಂಕದಂದು ನನಗೆ ನೋಟೀಸ ನೀಡಿದ್ದರೆಂದು ನನಗೆ ಈಗ ಹೇಳಲು ಆಗುವುದಿಲ್ಲ.

20. ನಿ.ಪಿ-11 ರಲ್ಲಿ ದಾವಾಸ್ತಿಯಲ್ಲಿ ನಾನು ಕಟ್ಟಡ ಕಟ್ಟುವ ಬಗ್ಗೆ ಅನುಮತಿ ಕೋರಿದ ಬಗ್ಗೆ ಯಾವುದೇ ಉಲ್ಲೇಖ ಆಗಿಲ್ಲ ಎಂದರೆ ಸರಿ.

21. ನಾನು ದಾವಾಸ್ತಿಯಲ್ಲಿ ಯಾವುದೇ ಅನುಮತಿಯನ್ನು ಪಡೆಯದೇ ಅಕ್ರಮವಾಗಿ ಕಟ್ಟಡ ಕಟ್ಟಲು ಪ್ರಯತ್ನಿಸಿದ್ದರಿಂದ ನಿ.ಪಿ-11 ರಂತೆ ನನಗೆ ನೋಟೀಸ ನೀಡಲಾಗಿತ್ತು ಎಂದರೆ ಸರಿಯಲ್ಲ.

22. ದಿಃ 21-03-2019 ರಂದು ದಾವಾಸ್ತಿಗೆ ಸಂಬಂದಿಸಿದಂತೆ ನನಗೆ 4 ನೇ ಪ್ರತಿವಾದಿ ಗ್ರಾಮ ಪಂಚಾಯತರವರು ನನಗೆ ನೋಟೀಸ ನೀಡಿದ್ದರೊ ಇಲ್ಲವೊ ಎಂದು ನನಗೆ ಈಗ ಹೇಳಲು ಆಗುವುದಿಲ್ಲ.

23. ನಿ.ಪಿ-12 ನ್ನು ನನಗೆ ಕಂದಾಯ ನೀರಿಕ್ಷಕರು ನೀಡಿರುತ್ತಾರೆ ಎಂದರೆ ಸರಿ. ನಿ.ಪಿ-11, 12 ಮತ್ತು ದಿಃ 21-03-2019 ರ ನೋಟೀಸ ನಂತರ ಸದರಿ ಕಟ್ಟದ ರಿಪೇರಿ ಕಾರ್ಯವನ್ನು 2021-2022 ನೇ ಸಾಲಿನಲ್ಲಿ ಪೂರ್ಣಗೊಳಿಸಿರುತ್ತೇನೆ. ಆ ಸಮಯದಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

24. ಸದರಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಲು ನ್ಯಾಯಾಲಯದಿಂದ ಅನುಮತಿ ಪಡೆದಿರುತ್ತೆನೆ ಇಲ್ಲವೊ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಕಟ್ಟಡವನ್ನು ಪೂರ್ಣಗೊಳಿಸಿರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ಮಾಹಿತಿ ನೀಡಿರುವುದಿಲ್ಲ.



ಈ ಹಂತದಲ್ಲಿ 4 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

ಸಹಿ ಇದೆ

ಸಿವಿಲ್ ನ್ಯಾಯಾಧೀಶರು ಸಿದ್ದಾಪುರ